**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ.  1682/2024**

| | | | |
|---|---|---|---|
| **ಹೆಸರು** | **:** | **ಬ್ರಹ್ಮಾನಂದ ರೆಡ್ಡಿ** | **ಚಾ.ಸಾ. 1** |
| **ತಂದೆಯ ಹೆಸರು** | **:** | **ಹಣಮಂತರೆಡ್ಡಿ** | **ಪ್ರಾ.ಸಾ. 1** |
| **ವಯಸ್ಸು** | **:** | **46 ವರ್ಷ** | **ದಿನಾಂಕಃ 06-08-2026** |
| **ಉದ್ಯೋಗ** | **:** | **ಖಾಸಗಿ ಕೆಲಸ** | |
| **ವಾಸಸ್ಥಳ** | **:** | **ಜಬೆಳ್ಳಾ, ತೆಲಂಗಾಣ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಆರೋಪಿತರು ನನ್ನ ದಾಯಾದಿಗಳು. ಚಾಸಾ-5 ನನ್ನ ತಾಯಿ. ಚಾಸಾ-4 ನನ್ನ ತಮ್ಮ. ಚಾಸಾ-2, 3,  6 ರಿಂದ 8ರವರ ಪರಿಚಯವಿದೆ.

ಈಗ ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯೂ ದೂರಾಗಿದ್ದು, ದಾಖಲೆಯನ್ನು ನಿಪಿ-1, ಸಾಕ್ಷಿದಾರರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ದಿನಾಂಕ 10-07-2023ರಂದು ಸ.ನಂ. 208 ವಿಸ್ತೀರ್ಣ 16 ಎಕರೆ 32 ಗುಂಟೆ ಜಮೀನಿನಲ್ಲಿ ನನ್ನ ತಾಯಿಯ ಪಾಲಿಗೆ ಬಂದ 4 ಎಕರೆ 6 ಗುಂಟೆ ಜಮೀನಿನಲ್ಲಿ ಬಿತ್ತನೆ ಮಾಡುವಾಗ ನಾನು, ಚಾಸಾ-4 ಮತ್ತು 5ರವರು ಬಿತ್ತಿನೆ ಮಾಡುತ್ತಿದ್ದಾಗ 4 ಜನ ಆರೋಪಿತರು ಕೂಡಿಕೊಂಡು ನಮ್ಮ ಜಮೀನಿಗೆ ಬಡಿಗೆಗಳನ್ನು ತೆಗೆದುಕೊಂಡು ಬಂದು, ನಮ್ಮ ಜಮೀನಿನಲ್ಲಿ ಯಾಕೆ ಬಿತ್ತನೆ ಮಾಡುತ್ತಿದ್ದಿರಿ ಅಂತ ಕೇಳಿ 2ನೇ ಆರೋಪಿ ಚಾಸಾ-5ರವರಿಗೆ ಕೈ ಮುಷ್ಟಿ ಮಾಡಿ ಹೊಡೆದರು. 1ನೇ ಆರೋಪಿ ನನಗೆ ಬಡಿಗೆಯಿಂದ ಬೆನ್ನ ಮೇಲೆ ಹೊಡೆದರು. 3ನೇ ಆರೋಪಿ ನಿಮ್ಮನೆಲ್ಲ ಖಲಾಸ್ ಮಾಡುತ್ತೇವೆ ನಿಮ್ಮನ್ನ ಬಿಡುವುದಿಲ್ಲ ಅಂತ ಜೀವ ಬೆದರಿಕೆ ಹಾಕಿದರು. 4ನೇ ಆರೋಪಿ ನನ್ನ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿರುತ್ತಾರೆ. ನಾವು ಚೀರಾಡುವ ಶಬ್ದ ಕೇಳಿ ಚಾಸಾ-6 ರಿಂದ 8ರವರು ಬಂದು ಜಗಳ ಬಿಡಿಸಿರುತ್ತಾರೆ. ಸಂಜೆ 6 ಗಂಟೆಯಾದ ಕಾರಣ ಬಿತ್ತುದ್ದನ್ನು ನಿಲ್ಲಿಸಿ ಮನೆಗೆ ಹೋದೇವು. ಬೆಳಗಿನ ಜಾವ 3 ಗಂಟೆಗೆ ನನಗೆ ಆರೋಗ್ಯ ಸಮಸ್ಯೆಯಾದ ಕಾರಣ ಆಂಬುಲೇನ್ಸನಲ್ಲಿ ನಾನು ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಬಂದು ದಾಖಲಾಗಿರುತ್ತೇನೆ. ಮುಂದಿನ ಚಿಕಿತ್ಸೆಗಾಗಿ ನನ್ನನ್ನು ಕಲಬುರಗಿ ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ದಿನಾಂಕ 15-07-2023ರಂದು ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ. ಸುಮಾರು ಒಂದು ತಿಂಗಳು ಕಳೆದ ನಂತರ ದಿನಾಂಕ 04-08-2023ರಂದು ಇದ್ದಕಿದ್ದ ಹಾಗೇ ಒಂದು ಮೊಬೈಲ್ ಸಂಖ್ಯೆಯಿಂದ ನನ್ನ ಮೊಬೈಲ್‌ಗೆ ನರೆಂದ್ರ ರೆಡ್ಡಿ ಎನ್ನುವವರು ನನಗೆ ಕರೆಮಾಡಿ ನೀವು ನಾಳೆ ಬೆಳಗಿನ ಜಾವ ಸೂರ್ಯನನ್ನು

ನೋಡುವುದಿಲ್ಲ ಅಂತ ಸಂಜೆ 4.52 ಗಂಟೆಗೆ ಕರೆ ಮಾಡಿ ನಿಮ್ಮನ್ನ ಖಲಾಸ್ ಮಾಡುತ್ತೇವೆ ಅಂತ ಜೀವ ಬೆದರಿಕೆ ಹಾಕಿದ್ದರು. ಆದ್ದರಿಂದ ನಾನು ಚವೆಲ್ಲಾ ತೆಲಂಗಾಣ ರಾಜ್ಯದಲ್ಲಿ ಹೋಗಿ ದೂರನ್ನು ಸಲ್ಲಿಸಿದ್ದೆ. ಪೊಲೀಸರ ವಿಚಾರಣೆಗೆ ಮೇರೆಗೆ ನಾನು ನಮ್ಮ ಮತ್ತು ಆರೋಪಿತರ ಮಧ್ಯ ಸಿವಿಲ್ ವ್ಯಾಜ್ಯ ಇರುವ ಕಾರಣ ಕರ್ನಾಟಕದಲ್ಲಿ ಜಗಳ ಆಗಿತ್ತು ಅಂತ ಅಂದಿದಕ್ಕೆ ಅಲ್ಲಿಯೇ ಹೋಗಿ ದೂರನ್ನು ಸಲ್ಲಿಸಿ ಅಂತ ಪೋಲಿಸರು ನನಗೆ ಹೇಳಿ ಕಳುಹಿಸಿದರು.

ದಿನಾಂಕ 10-07-2023 ರಂದು ಚಿಂಚೋಳಿ ಪೋಲಿಸ ಠಾಣೆಗೆ ನಾನು ದೂರನ್ನು ಸಲ್ಲಿಸಿದರು ಕೂಡ ಪೋಲಿಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಆದ್ದರಿಂದ ನಾನು ಎಸ್.ಪಿ.ರವರಿಗೆ ನನ್ನ ದೂರಿನ ಪ್ರತಿಯನ್ನು ಕಳುಹಿಸಿದ್ದೆ. ಅದು ಆದ ನಂತರ ಪೊಲೀಸ ಠಾಣೆಯವರು ನನಗೆ ಕರೆ ಮಾಡಿದರು. ಆದ್ದರಿಂದ ನಾನು ದೂರನ್ನು ಸಲ್ಲಿಸಿದ್ದೆ. ಅದೇ ದಿನ ಪೋಲಿಸರು ಸಂಜೆ 05.30 ರಿಂದ 6.30ರವರೆಗೆ ಪೋಲಿಸರು ಚಾಸಾ-2 ಮತ್ತು 3ರ ಸಮಕ್ಷಮ ಪಂಚನಾಮೆ ಜರುಗಿಸಿದರು. ಜಾಗವನ್ನು ನಾನೇ ತೋರಿಸಿದೆ. ಈಗ ನ್ಯಾಯಾಲಯದ ಮುಂದೆ ಇರುವ ಕೃತ್ಯಕ್ಕೆ ಬಳಸಿದ ಬಡಿಗೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಬಡಿಗೆಗಳನ್ನು ಜಪ್ತಿ ಪಡಿಸಿದ್ದಾರೆ ಅಂತ ಸಾಕ್ಷಿದಾರರು ನುಡಿದಿರುತ್ತಾರೆ. ಬಡಿಗೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**